
# ಶ್ರೀರಾಮಕೃಷ್ಣರ ಸತ್ಯವ್ರತ

◆ ಡಾ ॥ ಎಚ್.ಎನ್. ಮುರಳೀಧರ

ಸತ್ಯವಚನದ ಪ್ರಾಮುಖ್ಯ ಹಾಗೂ ತಾವು ಆ ಕುರಿತಾಗಿ ಜಗನ್ಮಾತೆಗೆ ಮಾಡಿದ ಪ್ರಾರ್ಥನೆಯ ಬಗೆಗೆ ಶ್ರೀರಾಮಕೃಷ್ಣರು ಒಮ್ಮೆ ಭಕ್ತರ ಮುಂದೆ ಹೇಳುತ್ತಾರೆ:

"ಸತ್ಯವಚನವೇ ಕಲಿಯುಗದ ತಪಸ್ಸು ಎಂಬ ಒಂದು ಹೇಳಿಕೆ ಇದೆ. ಸತ್ಯವನ್ನು ಬಲವಾಗಿ ಹಿಡಿದುಕೊಂಡಿದ್ದರೇನೇ ಭಗವಂತನ ದರ್ಶನ ದೊರೆಯುವುದು. ಸತ್ಯನಿಷ್ಠೆ ಇಲ್ಲದೆ ಇತ್ತು ಎಂದರೆ, ಕ್ರಮಕ್ರಮೇಣ ಇಹಪರ ಎಲ್ಲವನ್ನೂ ಕಳೆದುಕೊಳ್ಳಬೇಕಾಗುತ್ತದೆ. ಸರ್ವೆತೋಪಿನ ಕಡೆ ಹೋಗಿಬರುತ್ತೇನೆ ಎಂದು ಆಕಸ್ಮಿಕವಾಗಿ ನಾನು ಹೇಳಿಬಿಟ್ಟರೆ, ಆವಶ್ಯಕತೆ ಇಲ್ಲದಿದ್ದರೂ ಸತ್ಯನಿಷ್ಠೆ ಎಲ್ಲಿ ಕೈಬಿಟ್ಟು ಹೋಗಿಬಿಡುವುದೋ ಎಂದು ಹೆದರಿ, ಅಲ್ಲಿಗೆ ಸುಮ್ಮನೆ ಆದರೂ ಹೋಗಿಬರುತ್ತೇನೆ. ನನಗೆ ಭಗವತಿಯ ದರ್ಶನ ದೊರೆತನಂತರ ಕೈಯಲ್ಲಿ ಹೂವನ್ನು ತೆಗೆದುಕೊಂಡು ಪ್ರಾರ್ಥನೆ ಮಾಡಿದೆ: 'ಹೇ ಭಗವತಿ, ಇಗೋ ತೆಗೆದುಕೊ ನಿನ್ನ ಜ್ಞಾನವನ್ನು, ಇಗೋ ತೆಗೆದುಕೊ ನಿನ್ನ ಅಜ್ಞಾನವನ್ನು, ನನಗೆ ಶುದ್ಧ ಭಕ್ತಿಯನ್ನು ಕೊಡು ತಾಯೆ. ಇಗೋ ತೆಗೆದುಕೊ ನಿನ್ನ ಶುಚಿಯನ್ನು ಇಗೋ ತೆಗೆದುಕೊ ನಿನ್ನ ಅಶುಚಿಯನ್ನು. ನನಗೆ ಶುದ್ಧ ಭಕ್ತಿಯನ್ನು ಕರುಣಿಸು ತಾಯೆ: ಇಗೋ ತೆಗೆದುಕೊ ನಿನ್ನ ಕೆಟ್ಟದ್ದನ್ನು, ಇಗೊ ತೆಗೆದುಕೊ ನಿನ್ನ ಒಳ್ಳೆಯದನ್ನು. ನನಗೆ ಶುದ್ಧ ಭಕ್ತಿಯನ್ನು ನೀಡು ತಾಯೆ. ಇಗೋ ತೆಗೆದುಕೊ ನಿನ್ನ ಪುಣ್ಯವನ್ನು ಇಗೋ ತೆಗೆದುಕೊ ನಿನ್ನ ಪಾಪವನ್ನು. ನನಗೆ ಶುದ್ಧ ಭಕ್ತಿಯನ್ನು ಕರುಣಿಸು ತಾಯೆ.' ಇವುಗಳನ್ನೆಲ್ಲಾ ತೆಗೆದುಕೋ ಅಂತಲೇನೋ ಹೇಳಿದೆ, ಆದರೆ ಆಗ ಹೇಳಲಾಗಲಿಲ್ಲ: 'ಹೇ ತಾಯೆ, ಇಗೋ ತೆಗೆದುಕೊ ನಿನ್ನ ಸತ್ಯವನ್ನು. ಇಗೋ ತೆಗೆದುಕೊ ನಿನ್ನ ಅಸತ್ಯವನ್ನು' ಎಂದು. ಭಗವತಿಯ ಪಾದ ಪದ್ಮಗಳಲ್ಲಿ ಎಲ್ಲನ್ನೂ ಅರ್ಪಿಸಿಬಿಟ್ಟೆ. ಆದರೆ ಸತ್ಯವೊಂದನ್ನು ಮಾತ್ರ ಅರ್ಪಿಸಲು ಆಗಲಿಲ್ಲ."

ಶ್ರೀರಾಮಕೃಷ್ಣರ ಈ ಪ್ರಾರ್ಥನೆಯಲ್ಲಿ ನಾವು ಎರಡು ವಿಭಾಗ ಗಳನ್ನು ಗುರುತಿಸಬಹುದು. ಮೊದಲನೆಯ ವಿಭಾಗದಲ್ಲಿ ಜ್ಞಾನ-ಅಜ್ಞಾನ, ಶುಚಿ-ಅಶುಚಿ, ಒಳ್ಳೆಯದು-ಕೆಟ್ಟದ್ದು, ಪಾಪ-ಪುಣ್ಯ ಇವು ಬರುತ್ತವೆ. ಎರಡನೆಯ ವಿಭಾಗದಲ್ಲಿ ಸತ್ಯ-ಅಸತ್ಯಗಳು ಬರುತ್ತವೆ. ಶ್ರೀರಾಮಕೃಷ್ಣರೇ ಹೇಳಿಕೊಳ್ಳುವಂತೆ, ಅವರಿಂದ ಮೊದಲನೆಯ ವಿಭಾಗಕ್ಕೆ ಸೇರಿದವುಗಳನ್ನು ಭಗವತಿಗೆ ಅರ್ಪಿಸಲು ಸಾಧ್ಯ ವಾಯಿತು. ಆದರೆ ಎರಡನೆಯ ವಿಭಾಗಕ್ಕೆ ಸೇರಿದ್ದನ್ನು ಅರ್ಪಿಸಲು ಸಾಧ್ಯವಾಗಲಿಲ್ಲ. ಎಂದರೆ ಇವೆರಡರ ನಡುವೆ ಗುಣಾತ್ಮಕವಾದ ವ್ಯತ್ಯಾಸವಿರುವುದನ್ನು ಇದರಿಂದ ನಾವು ಗ್ರಹಿಸಬಹುದು. ಹಾಗಾದರೆ ಶ್ರೀರಾಮಕೃಷ್ಣರ ದೃಷ್ಟಿಯು ಸತ್ಯವನ್ನು ಅರ್ಥಾತ್ ಅಸ್ತಿತ್ವ ಸಮಸ್ತ



ವನ್ನು ಕಂಡುಕೊಂಡಿದ್ದು ಹೇಗೆ?

ಶ್ರೀರಾಮಕೃಷ್ಣರು ಸತ್ಯವನ್ನು ಅದರ ಪೂರ್ಣತೆಯಲ್ಲಿ ಕಾಣು ವವರು. ಶ್ರೀರಾಮಕೃಷ್ಣ ವಚನವೇದದಲ್ಲಿ ಬರುವ ಸಂವಾದ ವೊಂದು ಈ ಕುರಿತಾಗಿ ಬೆಳಕು ಬೀರುವಂತಿದೆ.

**ಶ್ರೀರಾಮಕೃಷ್ಣರು**: ಭಗವಂತನ ಸಾಕ್ಷಾತ್ಕಾರ ದೊರೆಯದವರೆಗೆ 'ನೇತಿ, ನೇತಿ' ಮಾರ್ಗವನ್ನು ಅನುಸರಿಸಿ ಈ ಜಗತ್ತನ್ನು ತ್ಯಜಿಸ ಬೇಕು. ಆದರೆ ಯಾರು ಭಗವಂತನ ಸಾಕ್ಷಾತ್ಕಾರವನ್ನು ಪಡೆದು ಕೊಂಡಿದ್ದಾರೊ ಅವರಿಗೆ ಗೊತ್ತಿದೆ ಆತನೇ ಎಲ್ಲವೂ ಆಗಿದ್ದಾನೆ ಎಂಬುದು. ಆಗ ಬೋಧೆಯಾಗುತ್ತದೆ, ಈಶ್ವರಮಯ ಜೀವ ಜಗತ್ ಎಂಬುದಾಗಿ. ಜೀವಜಗತ್ತೆಲ್ಲವೂ ಕೇವಲ ಆತನೇ. ಒಂದು ಪಕ್ಷ ನೀನು ಬೇಲದ ಹಣ್ಣನ್ನು ಒಡೆದು, ಅದರ ಕರಟ, ತಿರುಳು, ಬೀಜ ಇವನ್ನು ಪ್ರತ್ಯೇಕ ಮಾಡಿರುವಾಗ ಒಬ್ಬ ಬಂದು ನಿನ್ನನ್ನು ಬೇಲದ ಹಣ್ಣಿನ ತೂಕ ಎಷ್ಟು ಎಂದು ಕೇಳುತ್ತಾನೆ ಅಂತ ಇಟ್ಟುಕೊ. ಆಗ ನೀನು ಕರಟ, ಬೀಜ ಇವನ್ನು ಬಿಸಾಡಿ, ಕೇವಲ ತಿರುಳನ್ನು ಮಾತ್ರ ತೂಗಿ ನೋಡುವಿಯೇನು? ಎಂದಿಗೂ ಇಲ್ಲ. ಅದರ ನಿಜವಾದ ತೂಕ ಸಿಕ್ಕಬೇಕಾದರೆ ಕರಟ, ಬೀಜ, ತಿರುಳು



ಬೆಂಗಳೂರಿನ ವಾಣಿವಿಲಾಸ ರಸ್ತೆಯಲ್ಲಿರುವ ವಿ.ವಿ.ಎಸ್. ಪದವಿ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿರುವ ಲೇಖಕರು ಹಲ ವಾರು ಅನುವಾದಗಳನ್ನು, ಸ್ವಂತ ರಚನೆಗಳನ್ನು ಪ್ರಕಟಿಸಿರುವರು. ವಿದ್ವತ್‌ಪೂರ್ಣ ಬರಹ ಹಾಗೂ ಉಪನ್ಯಾಸಗಳಿಗೆ ಪ್ರಸಿದ್ಧರು.

ಮೂರನ್ನೂ ಸೇರಿಸಿ ತೂಗಬೇಕು. ಆಗ ಮಾತ್ರವೇ ನೀನು ಅದರ ತೂಕವನ್ನು, ಅದರ ನಿಜವಾದ ತೂಕವನ್ನು ಹೇಳಬಲ್ಲೆ. ಕರಟ ಈ ಜಗತ್ತು ಇದ್ದಹಾಗೆ. ಬೀಜಗಳೆಲ್ಲಾ ಜೀವಗಳು ಇದ್ದ ಹಾಗೆ. ವಿಚಾರದ ಅವಸ್ಥೆಯಲ್ಲಿ ಮನುಷ್ಯ ಭಾವಿಸುತ್ತಾನೆ, ಜೀವ ಜಗತ್ತುಗಳು ಅನಾತ್ಮ-ಅವಸ್ತು ಎಂಬುದಾಗಿ. ಆ ಸಮಯದಲ್ಲಿ ಬೋಧೆಯಾಗುತ್ತದೆ, ತಿರುಳೇ ನಿಜವಾದ ಸಾರ, ಕರಟ ಬೀಜ ಅಸಾರ ಎಂಬುದಾಗಿ. ಆದರೆ ವಿಚಾರ ಮುಗಿದ ನಂತರ ಅವು ಮೂರೂ ಸೇರಿ ಒಂದು ಪೂರ್ಣವಸ್ತುವಾಗಿದೆ ಎಂಬ ಬೋಧೆಯಾಗುತ್ತದೆ. ಯಾವ ವಸ್ತುವಿನಿಂದ ತಿರುಳು ಉದ್ಭವವಾಗಿದೆಯೊ, ಅದೇ ವಸ್ತುವಿನಿಂದ ಕರಟ ಬೀಜ ಕೂಡ ಉದ್ಭವವಾಗಿದೆ ಅಂತ. ಬೇಲದ ಹಣ್ಣಿನ ನೈಜಸ್ವರೂಪವನ್ನು ಅರಿಯಬೇಕಾದರೆ ಅವು ಮೂರನ್ನೂ ಗಣನೆಗೆ ತೆಗೆದುಕೊಳ್ಳಬೇಕು.

"ಇದು ಅನುಲೋಮ ಮತ್ತು ವಿಲೋಮ...

"ನಿತ್ಯ ಯಾರದೋ ಆತನದೇ ಲೀಲೆ. ಲೀಲೆ ಯಾರದೋ ಆತನದೇ ನಿತ್ಯ. ಯಾರು ಈಶ್ವರನಾಗಿ ವ್ಯಕ್ತವಾಗಿದ್ದಾನೊ, ಆತನೇ ಈ ಜೀವಜಗತ್ತಾಗಿ ವ್ಯಕ್ತವಾಗಿದ್ದಾನೆ. ಯಾರಿಗೆ ಭಗವಂತನ ಸಾಕ್ಷಾತ್ಕಾರವಾಗಿದೆಯೊ, ಆತನಿಗೆ ಗೊತ್ತಿದೆ ಆತನೇ ಸಮಸ್ತವೂ, ಎಂದರೆ ತಾಯಿ, ತಂದೆ, ಮಗು, ನೆರೆಯವ, ಜೀವಜಂತು. ಒಳ್ಳೆಯದು, ಕೆಟ್ಟದ್ದು, ಶುಚಿ, ಅಶುಚಿ, ಇತ್ಯಾದಿ ಆಗಿದ್ದಾನೆ ಎಂಬುದಾಗಿ.

ನೆರೆಯವ: "ಹಾಗಾದರೆ ಪಾಪ-ಪುಣ್ಯ ಎಂಬುದೇನಿಲ್ಲವೆ?"

ಶ್ರೀರಾಮಕೃಷ್ಣರು : "ಅವು ಇವೆ ಮತ್ತೆ ಇಲ್ಲ. ಭಗವಂತ ಮನುಷ್ಯನಲ್ಲಿ ಅಹಂ ತತ್ತ್ವವನ್ನು ಇಟ್ಟಿದ್ದೇ ಆದರೆ, ಆತ ಆತನಲ್ಲಿ ಭೇದಬುದ್ಧಿಯನ್ನೂ ಇಡುತ್ತಾನೆ. ಪಾಪ-ಪುಣ್ಯ ಜ್ಞಾನವನ್ನೂ ಇಡುತ್ತಾನೆ. ಆದರೆ ಆತ ಎಲ್ಲೋ ಕೆಲವರ ಅಹಂಕಾರವನ್ನು ಮಾತ್ರ ಸಂಪೂರ್ಣವಾಗಿ ತೆಗೆದುಹಾಕಿಬಿಡುತ್ತಾನೆ. ಅವರು ಪಾಪ-ಪುಣ್ಯ, ಒಳ್ಳೆಯದು-ಕೆಟ್ಟದ್ದು, ಇವನ್ನು ದಾಟಿ ಹೋಗಿಬಿಡುತ್ತಾರೆ. ಭಗವಂತನ ದರ್ಶನ ಆಗದವರಿಗೆ ಭೇದಬುದ್ಧಿ, ಒಳ್ಳೆಯದು ಕೆಟ್ಟದ್ದರ ಜ್ಞಾನ ಇದ್ದೇ ಇರುತ್ತದೆ..."

ಈ ಮೇಲಿನ ಸಂವಾದದಲ್ಲಿ ಮುಖ್ಯವಾಗಿ ನಮ್ಮ ಗಮನಕ್ಕೆ ಬರುವ ಒಂದು ಸಂಗತಿಯೆಂದರೆ ಅಸ್ತಿತ್ವದ ಎರಡು ಸ್ಥಿತಿಗಳು. ಒಂದು ಸಾಪೇಕ್ಷ, ಇನ್ನೊಂದು ನಿರಪೇಕ್ಷ . ಮೊದಲನೆಯದರಲ್ಲಿ ಸಾರ-ಅಸಾರಗಳನ್ನು ಬೇರ್ಪಡಿಸಲಾಗುತ್ತದೆ; ಅಂತೆಯೇ ದ್ವಂದ್ವಗಳನ್ನೂ ಗುರುತಿಸಲಾಗುತ್ತದೆ. ಆದರೆ ಎರಡನೆಯದು ಅಸ್ತಿತ್ವವನ್ನು ಅದರ ಅಖಂಡತೆಯಲ್ಲಿ ಗ್ರಹಿಸುವಂಥದು. ಅಲ್ಲಿ ಎಲ್ಲವೂ ಒಂದೇ: ಸಾರ-ಅಸಾರಗಳಿಗಾಗಲಿ, ಪರಸ್ಪರ ವಿರುದ್ಧವಾಗಿ ತೋರುವ ದ್ವಂದ್ವಗಳಿಗಾಗಲೀ ಅಲ್ಲಿ ಅಸ್ತಿತ್ವವಿಲ್ಲ. ನೀರನ್ನು ನೀರೆಂದು ನೋಡಿದಾಗ ಅದರಲ್ಲಿ ಹಲವು ಬಗೆಗಳು: ತಣ್ಣೀರು-ಬಿಸಿನೀರು, ಶುದ್ಧವಾದ ನೀರು-ಅಶುದ್ಧವಾದ ನೀರು, ಮೆದು ನೀರು-ಗಡಸು ನೀರು ಇತ್ಯಾದಿ; ಅಲ್ಲದೆ ಅದು ಆವಿ-ದ್ರವ-ಮಂಜುಗಡ್ಡೆ ಮೊದಲಾದ ವಿವಿಧ ರೂಪಗಳನ್ನು ಕೂಡ ತಾಳ ಬಲ್ಲುದು. ಆದರೆ ಅದನ್ನು ಅದರ ಪರಮಾಣು ರಚನೆಯ ದೃಷ್ಟಿಯಿಂದ ನೋಡಿದಾಗ ಅಲ್ಲಿ ಎಲ್ಲವೂ ಒಂದೇ. ಈ ವೈವಿಧ್ಯಗಳಿಗೆ ಅಲ್ಲಿ ಅಸ್ತಿತ್ವವೇ ಇಲ್ಲ. ಅಸ್ತಿತ್ವದ ಈ ಎರಡು ಸ್ಥಿತಿಗಳನ್ನೇ ಶ್ರೀರಾಮಕೃಷ್ಣರು ಅನುಲೋಮ-ವಿಲೋಮಗಳೆಂಬ ಹೆಸರಿನಿಂದಲೂ ಗುರುತಿಸುವುದನ್ನು ಗಮನಿಸಬೇಕು.

ಈ ಆಲೋಚನೆಯ ಜಾಡನ್ನು ಮುಂದುವರಿಸಿಕೊಂಡು ಹೋದರೆ ನಮಗೆ ಒಂದು ಸಂಗತಿ ಸ್ಪಷ್ಟವಾಗುತ್ತದೆ. ಅದೆಂದರೆ, ಶ್ರೀರಾಮಕೃಷ್ಣರು ಜ್ಞಾನ-ಅಜ್ಞಾನ, ಶುಚಿ-ಅಶುಚಿ, ಒಳ್ಳೆಯದು-ಕೆಟ್ಟದ್ದು, ಪಾಪ-ಪುಣ್ಯ ಮೊದಲಾದ ದ್ವಂದ್ವಗಳನ್ನು ಗುರುತಿಸುವುದು ಅಸ್ತಿತ್ವದ ಸಾಪೇಕ್ಷ ಸ್ಥಿತಿಯಲ್ಲಿ. ಆದ್ದರಿಂದಲೇ ಅವುಗಳಿಂದ ಮೇಲೇರಲು ಈ ದ್ವಂದ್ವಗಳನ್ನು ಭಗವತಿಗೆ ಸಮರ್ಪಿಸುವ ಪ್ರಾರ್ಥನೆಯನ್ನು ಸಲ್ಲಿಸುವುದಕ್ಕೂ ಅವರಿಗೆ ಸಾಧ್ಯವಾಯಿತು. ಆದರೆ ಸತ್ಯವನ್ನು ಅವರು ಸರ್ವದಾ ಕಾಣುತ್ತಿದ್ದುದು ಅದರ ನಿರಪೇಕ್ಷ ಸ್ಥಿತಿಯಲ್ಲೇ; ಆದ್ದರಿಂದಲೇ ಅದನ್ನು ಸತ್ಯ-ಅಸತ್ಯಗಳೆಂದು, ಇರುವಿಕೆ-ಇಲ್ಲದಿರುವಿಕೆಗಳೆಂದು ವಿಭಜಿಸುವುದು ಅವರಿಗೆ ಸಾಧ್ಯವಾಗಲಿಲ್ಲ. ಸಾಪೇಕ್ಷ ಸ್ಥಿತಿಯಲ್ಲೇ ಎಲ್ಲ ತಿಳುವಳಿಕೆಯನ್ನು ಗ್ರಹಿಸುವ ಸಾಮಾನ್ಯರು ಮಾತ್ರ ಸತ್ಯ-ಅಸತ್ಯಗಳೆಂಬ ಈ ಬಗೆಯ ವಿಭಜನೆಯನ್ನು ಮಾಡಬಲ್ಲರು. ಮಾತು ಮತ್ತು ಕೃತಿಗಳೆಂಬ ಮತ್ತೊಂದು ದ್ವಂದ್ವವೂ ಇಲ್ಲಿ ತಲೆದೋರುತ್ತದೆ. ಇದರಿಂದಾಗಿ ಹೇಳುವುದು ಮತ್ತು ಮಾಡುವುದು ಅಥವಾ ಮಾಡದಿರುವುದು ಎಂಬ ವಿಭಾಗಗಳೂ ಏರ್ಪಡುತ್ತವೆ. ಆದರೆ ಮೇಲ್ನೋಟಕ್ಕೆ ನಮಗೆ ಸೀಮಿತವೆಂದು ತೋರುವ ತಮ್ಮ ಲೌಕಿಕ ಅಸ್ತಿತ್ವದ ಪ್ರಕಟನೆಯಲ್ಲಿಯೂ ಶ್ರೀರಾಮಕೃಷ್ಣರಂತಹ ಸಿದ್ಧಪುರುಷರು ಸತ್ಯದ ಅಖಂಡತೆಯನ್ನೇ ಪ್ರಕಟಿಸುವುದನ್ನು ನಾವು ಕಾಣುತ್ತೇವೆ. ಇದಕ್ಕೆ ಒಂದೆರಡು ನಿದರ್ಶನಗಳನ್ನು ನಾವು ಅವರ ಜೀವನದಿಂದಲೇ ನೀಡಬಹುದು.

ಒಮ್ಮೆ ಶ್ರೀರಾಮಕೃಷ್ಣ ಪರಮಹಂಸರು ತಮ್ಮ ಭಕ್ತ ಶಂಭುಚರಣ ಮಲ್ಲಿಕನ ಮನೆಗೆ ಹೋಗಿದ್ದ ಸಂದರ್ಭ. ಅವರು ಆಗಾಗ ಅತಿಸಾರದಿಂದ ಕಷ್ಟಪಡುವುದನ್ನು ತಿಳಿದ ಶಂಭುಮಲ್ಲಿಕ ಅವರಿಗೆ ತನ್ನ ದವಾಖಾನೆಯಿಂದ ಒಂದೆರಡು ಡೋಸು ಅಫೀಮು ಕೊಡುವುದಾಗಿ ಹೇಳಿದ. ಆದರೆ ಮಾತಿನ ಭರದಲ್ಲಿ ಅವನು ಕೊಡುವುದನ್ನು ಮರೆತ; ಶ್ರೀರಾಮಕೃಷ್ಣರೂ ಕೇಳುವುದನ್ನು ಮರೆತರು. ಅವನಿಂದ ಬೀಳ್ಕೊಂಡು ಹೊರಟ ಮೇಲೆ ಶ್ರೀರಾಮಕೃಷ್ಣರಿಗೆ ಅಫೀಮಿನ ನೆನಪಾಯಿತು. ಹೋಗಿ ಮತ್ತೆ ಶಂಭುಮಲ್ಲಿಕನಿಗೆ ತೊಂದರೆ ಕೊಡುವುದೇಕೆಂದು ಆ ದವಾಖಾನೆಯ ವ್ಯಕ್ತಿಯೊಬ್ಬನಿಂದ ಅಫೀಮನ್ನು ಪಡೆದು ಹೊರಟರು ಆದರೆ ಆಶ್ಚರ್ಯವೆಂದರೆ ಅವರಿಗೆ ತಮ್ಮ ದಾರಿಯೇ ಗೊತ್ತಾಗುತ್ತಿಲ್ಲ! ಹಿಂದಕ್ಕೆ ತಿರುಗಿ ನೋಡಿದರೆ ಶಂಭುವಿನ ಮನೆಯ ದಾರಿ ಮಾತ್ರ ಸ್ಪಷ್ಟವಾಗಿ ಕಾಣುತ್ತಿದೆ! ಹಿಂದಕ್ಕೆ ಹೋಗಿ ಮತ್ತೊಮ್ಮೆ ಎಚ್ಚರಿಕೆಯಿಂದ ಹೆಜ್ಜೆಯಿಡಲಾರಂಭಿಸಿದರು. ಆದರೆ ಮತ್ತೆ ಅದೇ ಪಾಡು! ತಮ್ಮನ್ನು ಯಾರೋ ಹಿಂದಕ್ಕೆ ಜಗ್ಗಿ ಎಳೆಯುತ್ತಿರುವಂಥ ಅನುಭವ! ಮತ್ತೆ

ಮತ್ತೆ ಹೀಗಾದ ಬಳಿಕ ಅವರಿಗೆ ನೆನಪಾಯಿತು—ತಾವು ಅಫೀಮನ್ನು ನೇರವಾಗಿ ಶಂಭು ಮಲ್ಲಿಕನಿಂದ ಪಡೆಯುವುದಕ್ಕೆ ಬದಲಾಗಿ ದವಾಖಾನೆಯ ಮನುಷ್ಯನಿಂದ ಪಡೆದಿರುವುದು! ಮತ್ತೆ ಹಿಂದಿರುಗಿ, ಅಫೀಮಿನ ಪೊಟ್ಟಣವನ್ನು ಶಂಭುವಿನ ಮನೆಯ ಕಿಟಕಿಯೊಂದರಿಂದ ಒಳಕ್ಕೆ ಹಾಕುತ್ತ ಹೇಳಿದರು: "ನೋಡು, ನಾನು ನಿನ್ನ ಅಫೀಮನ್ನು ಹಿಂದಿರುಗಿಸುತ್ತಿದ್ದೇನೆ." ಈಗ ಶ್ರೀರಾಮಕೃಷ್ಣರಿಗೆ ತಮ್ಮ ದಾರಿ ಸ್ಪಷ್ಟವಾಗಿ ಕಾಣಿಸಿತು. ಯಾವುದೇ ತೊಂದರೆಯಿಲ್ಲದೆ ತಮ್ಮ ಕೋಣೆಯನ್ನು ತಲುಪಿದರು.

ಶ್ರೀರಾಮಕೃಷ್ಣರಿಗೆ ನಿಂಬೆಹಣ್ಣು ಪ್ರಿಯವೆಂದು ಅವರ ಶಿಷ್ಯ ಯೋಗೇನ್ (ಸ್ವಾಮಿ ಯೋಗಾನಂದ) ಅವರಿಗೆ ಪ್ರತಿದಿನ ಭಕ್ತನೊಬ್ಬನ ತೋಟದಿಂದ ನಿಂಬೆ ಹಣ್ಣು ತಂದುಕೊಡುತ್ತಿದ್ದ. ಆದರೆ ಒಂದು ದಿನ ಮಾತ್ರ ಅವನು ತಂದ ನಿಂಬೆಹಣ್ಣನ್ನು ಶ್ರೀರಾಮಕೃಷ್ಣರಿಂದ ತಿನ್ನುವುದಕ್ಕೇ ಆಗಲಿಲ್ಲ. "ಇದನ್ನು ನೀನು ನಿನ್ನೆ ಎಲ್ಲಿಂದ ತಂದೆ? ನನ್ನಿಂದ ತಿನ್ನಲಾಗುತ್ತಿಲ್ಲ" ಎಂದು ಯೋಗೇನನನ್ನು ಕೇಳಿ ದರು. ಯೋಗೇನನ ಮನಸ್ಸಿಗೂ ಬಹಳ ನೋವಾಯಿತು. ಇದಕ್ಕೆ ಕಾರಣವೇನಿರ ಬಹುದೆಂದು ವಿಚಾರಿಸಿ ನೋಡಿದ. ಆಗ ತಿಳಿದುಬಂದಿತು—ಯೋಗೇನನಿಗೆ ನಿಂಬೆ ಹಣ್ಣುಗಳನ್ನು ತೆಗೆದುಕೊಂಡು ಹೋಗಲು ಅನುಮತಿ ನೀಡಿದ್ದ ಭಕ್ತ ಆ ತೋಟವನ್ನು ಗೇಣಿಗೆ ಪಡೆದಿದ್ದ. ಆದರೆ ಹಿಂದಿನ ದಿನಕ್ಕೆ ಅವನ ಗೇಣಿಯ ಅವಧಿ ಮುಕ್ತಾಯಗೊಂಡಿತ್ತು. ಆದ್ದರಿಂದ ಅಂದು ಯೋಗೇನ್ ಹೊಸ ಮಾಲೀಕ ನಿಂದ ಅನುಮತಿ ಪಡೆಯಬೇಕಿತ್ತು. ಆದರೆ ಪಡೆದಿರಲಿಲ್ಲ!

ಎಷ್ಟೋ ಸಲ ಶ್ರೀರಾಮಕೃಷ್ಣರು ಊಟದ ಮಧ್ಯೆ "ಇನ್ನು ಸಾಕು" ಎಂದೇನಾದರೂ ಹೇಳಿಬಿಟ್ಟರೆ, ಆ ಬಳಿಕ ಅವರ ಕೈ ಅಕ್ಷರಶಃ ಮರಗಟ್ಟಿದಂತಾಗಿಬಿಡುತ್ತಿತ್ತು. ಅವರು ಎಷ್ಟೇ ಪ್ರಯತ್ನಪಟ್ಟರೂ ಅದು ಅವರ ಬಾಯಿಗೆ ಹೋಗುತ್ತಲೇ ಇರಲಿಲ್ಲ! ಹೀಗಾಗಿ ಅವರು ಊಟ ನಿಲ್ಲಿಸಬೇಕಾಗುತ್ತಿತ್ತು. ಇದರಿಂದ ಅವರಿಗೆ ಸ್ವಲ್ಪ ಹೊತ್ತಿನಲ್ಲೇ ಹಸಿವಾಗಿಬಿಡುತ್ತಿತ್ತು.

ಈ ಮೇಲಿನ ನಿದರ್ಶನಗಳು ಮನದಟ್ಟುಪಡಿಸುವ ಒಂದು ಸಂಗತಿಯೆಂದರೆ ಶ್ರೀರಾಮಕೃಷ್ಣರ ಸಂಕಲ್ಪ-ಮಾತು-ಕೃತಿಗಳ ಅನ್ಯೋನ್ಯತೆ. ಪ್ರಜ್ಞೆಗೂ (Mind) ಶರೀರಕ್ಕೂ (Matter) ಇರುವ ಸಂಬಂಧವನ್ನು ವಿವರಿಸಲು ಪಾಶ್ಚಾತ್ಯ ತತ್ತ್ವಶಾಸ್ತ್ರದಲ್ಲಿ ಹಲವು ಸಿದ್ಧಾಂತಗಳನ್ನು ಮಂಡಿಸಲಾಗಿದೆ. ಇಷ್ಟಾದರೂ ನಿರ್ಣಯವೆಂದು ಯಾವುದೂ ಅಂಗೀಕೃತವಾಗಿಲ್ಲ. ಭಾರತೀಯ ದೃಷ್ಟಿಕೋನ ಮಾತ್ರ ಮನಸ್ಸು-ಶರೀರಗಳನ್ನು ಗುಣಾತ್ಮಕವಾಗಿ ವಿಂಗಡಿಸದೆ ಸೂಕ್ಷ್ಮ-ಸ್ಥೂಲಗಳ ತರತಮದಲ್ಲಿ ಅವುಗಳನ್ನಿಟ್ಟು ನೋಡುತ್ತದೆ. ಅಪಕ್ವ ಸ್ಥಿತಿಯಲ್ಲಿ ತ್ರಿಗುಣಗಳ ನಡುವಿನ ನಿರಂತರ ತಾಕಲಾಟದಿಂದಾಗಿ ಮನಸ್ಸು-ಶರೀರಗಳ ನಡುವೆ ಸಾಮರಸ್ಯ-ಸಾಮಂಜಸ್ಯಗಳು ಏರ್ಪಡುವುದಿಲ್ಲ. ಆದರೆ ಸಿದ್ಧಸ್ಥಿತಿಯಲ್ಲಿ ಮನಸ್ಸು-ಕೃತಿಗಳೆರಡೂ ಒಂದೇ ಅಸ್ತಿತ್ವದ ಎರಡು ಆಯಾಮಗಳಾಗಿದ್ದು, ಎರಡರ ಮೂಲಕವೂ ಆತ್ಮದ ಶುದ್ಧ ಚೈತನ್ಯವೇ ಪ್ರಕಾಶಿಸುತ್ತದೆ. ಶ್ರೀರಾಮಕೃಷ್ಣರನ್ನು ಕುರಿತ ಆರಾತ್ರಿಕ ಸ್ತೋತ್ರದಲ್ಲಿ ('ಖಂಡನ ಭವಬಂಧನ....') ಸ್ವಾಮಿ ವಿವೇಕಾನಂದರು ಶ್ರೀರಾಮಕೃಷ್ಣರ ಶರೀರವನ್ನು 'ಚಿದ್ಘನ ಕಾಯ' ಎಂದು ಕರೆದಿರುವುದನ್ನು ಈ ಹಿನ್ನೆಲೆಯಲ್ಲಿ ಗ್ರಹಿಸಬಹುದು. ಆದ್ದರಿಂದಲೆ ಇಲ್ಲಿ ಸತ್ಯವ್ರತವೆನ್ನುವುದು ಕೇವಲ ವಾಚಿಕವಾಗದೆ ಅಸ್ತಿತ್ವಸಮಸ್ತವನ್ನೇ ಒಳಗೊಳ್ಳುತ್ತಿರುತ್ತದೆ; ಮೇಲ್ನೋಟಕ್ಕೆ ಸಂಬಂಧಪಡದಂತೆ ತೋರುವ ಸಂಗತಿಗಳನ್ನು ಅಖಂಡವಾದ ಏಕಸೂತ್ರತೆಯೊಂದರಲ್ಲಿ ಕಟ್ಟಿ ತೋರಿಸುತ್ತಿರುತ್ತದೆ. ಅಸ್ತಿತ್ವದ ಸಾಪೇಕ್ಷ ಹಾಗೂ ನಿರಪೇಕ್ಷ ನೆಲೆಗಳನ್ನು ಸಾಬೀತು ಪಡಿಸುತ್ತಿರುತ್ತದೆ.

ಅಲ್ಲದೆ ಅಪಕ್ವ ಸ್ಥಿತಿಯಲ್ಲಿ ಸ್ಥೂಲವು ಸೂಕ್ಷ್ಮವನ್ನು ನಿಯಂತ್ರಿಸುತ್ತಿದ್ದರೆ ಪಕ್ವಸ್ಥಿತಿಯಲ್ಲಿ ಸೂಕ್ಷ್ಮವೇ ಸ್ಥೂಲವನ್ನು ನಿಯಂತ್ರಿಸುತ್ತಿರುತ್ತದೆ. ಲೋಹದ ಸ್ಪರ್ಶಮಾತ್ರದಿಂದ ಶ್ರೀರಾಮಕೃಷ್ಣರ ಶರೀರ ಕೆಲವೊಮ್ಮೆ ವಿದ್ಯುದಾಘಾತಕ್ಕೆ ಒಳಗಾಗುತ್ತಿದ್ದುದನ್ನೂ ಕೆಲವೊಮ್ಮೆ ಮರಗಟ್ಟುತ್ತಿದ್ದುದನ್ನೂ ಈ ಪ್ರಕ್ರಿಯೆಯ ಇನ್ನೊಂದು ಮುಖವೆಂದು ನಾವು ತಿಳಿಯಬಹುದಾಗಿದೆ. ಜೊತೆಗೆ ತಮ್ಮ ದರ್ಶನದ ಋಜುತ್ವವನ್ನು ಸಾಬೀತು ಪಡಿಸಿಕೊಳ್ಳುವುದಕ್ಕಾಗಿ ಶ್ರೀರಾಮಕೃಷ್ಣರು ನಹಬತ್ತಿನ ಮುಂದಿದ್ದ ಬಂಡೆ ಮೂರು ಸಲ ನೆಗೆಯಲಿ ಎಂದುಕೊಂಡಾಗ ಅದು ಹಾಗೇ ಆದದ್ದನ್ನೂ ಈ ಪ್ರಕ್ರಿಯೆಯ ಮುಂದುವರಿಕೆಯಾಗಿಯೇ ನೋಡಬಹುದು. ಗುರುತ್ವಾಕರ್ಷಣೆಯ ಶೋಧವು ಅಸ್ತಿತ್ವದ ಅರ್ಥಗ್ರಹಿಕೆಯ ಮೇಲೆ ಹೊಸ ಬೆಳಕನ್ನು ಚೆಲ್ಲಿದಂತೆ ಶ್ರೀರಾಮಕೃಷ್ಣರ ಜೀವನವೂ ಅಂತರಂಗದ ಲೋಕದ ನಿಗೂಢಗಳನ್ನು ಬೆಳಕಿಗೆ ತರುತ್ತಲೇ ಇರುತ್ತದೆ.

ಉಲ್ಲೇಖಗಳು :

೧. ಶ್ರೀರಾಮಕೃಷ್ಣ ವಚನವೇದ, ಸಂಪುಟ ೧, ಪು. ೫೯೨
೨. ಅದೇ, ಪು.೩೧೧-೧೨
೩. Life of Sri Ramakrishna (Kolkata, Advaita Ashrama) ಪು. ೨೦೩
೪. Swami Chetanananda, Ramakrishna As We Saw Him (Kolkata, Advaita Ashrama) ಪು. ೧೦೩
೫. ಅದೇ, ಪು. ೩೪೩
೬. ಅದೇ, ಪು.೨೫೪

## ಆಶ್ರಮದ ಕಾರ್ಯಕ್ರಮಗಳು

### ಮಾರ್ಚ್ 2005

| | | |
|---|---|---|
| ಏಕಾದಶಿ | 06 | ಬುಧವಾರ |
| ಮಹಾಶಿವರಾತ್ರಿ | 08 | ಮಂಗಳವಾರ |
| ಶ್ರೀರಾಮಕೃಷ್ಣ ಜಯಂತಿ | 12 | ಶನಿವಾರ |
| ಏಕಾದಶಿ | 21 | ಸೋಮವಾರ |
| ಶ್ರೀಚೈತನ್ಯ ಜಯಂತಿ | 25 | ಶುಕ್ರವಾರ |
| ಸ್ವಾಮಿ ಯೋಗಾನಂದ ಜಯಂತಿ | 29 | ಮಂಗಳವಾರ |